ಮೈಸೂರಿನ ಕೆಎಸ್‌ಐಸಿ ಸೀರೆ ನೇಯ್ಗೆ ಕಾರ್ಖಾನೆಯ ಒಳಗೆ...



**ಮೈಸೂರು ಸಾಂಸ್ಕೃತಿಕ ನಗರಿಯಾಗಿ ಎಷ್ಟು ಪ್ರಸಿದ್ಧಿಯೋ, ಅಷ್ಟೇ ರೇಷ್ಮೆ ಸೀರೆಗೂ ಹೆಸರುವಾಸಿ. ಇಂಥ ಮೈಸೂರು ರೇಷ್ಮೆ ಸೀರೆಗೆ 2005–06ರಲ್ಲಿ ಭೌಗೋಳಿಕ ವಿಶಿಷ್ಟ ಮಾನ್ಯತೆ (ಜಿಐ ಟ್ಯಾಗ್) ಲಭಿಸಿದೆ.**

**■ ಕೃಷ್ಣಿ ಶಿರೂರ**

# ಕರುನಾಡ ಹೆಮ್ಮೆ ಮೈಸೂರ್ ಸಿಲ್ಕ್

ಸೀರೆ ಉಡುವ ಎಲ್ಲ ಹೆಂಗಳೆಯರಿಗೂ ಇರೋ ಒಂದು ಆಸೆ ಏನ್ ಗೊತ್ತಾ? ಮೈಸೂರು ರೇಷ್ಮೆ ಸೀರೆ ಉಡೋದು. ನಿದ್ದೆ ಬಿಟ್ಟು, ಸರದಿ ಸಾಲಿನಲ್ಲಿ ನಿಂತು ಟೋಕನ್ ಪಡೆದು ಮೈಸೂರು ರೇಷ್ಮೆ ಸೀರೆಯ ಒಡತಿಯಾಗುವವರ ಸಂಖ್ಯೆ ಹೆಚ್ಚುತ್ತಿರುವುದೇ ಹೇಳುತ್ತದೆ, ಮೈಸೂರು ಸಿಲ್ಕ್ ಸೀರೆ ಮೇಲಿನ ಹುಚ್ಚು ಎಂಥದ್ದು ಎಂದು.

ಮೈಸೂರು ಸಾಂಸ್ಕೃತಿಕ ನಗರಿಯಾಗಿ ಎಷ್ಟು ಪ್ರಸಿದ್ಧಿಯೋ, ರೇಷ್ಮೆ ಸೀರೆಗೂ ಅಷ್ಟೇ ಹೆಸರುವಾಸಿ. ಇಂಥ ಮೈಸೂರು ರೇಷ್ಮೆ ಸೀರೆಗೆ 2005–06ರಲ್ಲಿ ಭೌಗೋಳಿಕ ವಿಶಿಷ್ಟ ಮಾನ್ಯತೆ (ಜಿಐ ಟ್ಯಾಗ್) ಲಭಿಸಿದೆ. ಈ ಮಾನ್ಯತೆಗಾಗಿ ಕರ್ನಾಟಕ ರೇಷ್ಮೆ ಉದ್ಯಮಗಳ ನಿಯಮಿತ (ಕೆಎಸ್‌ಐಸಿ) 2004ರ ಜುಲೈ 22ರಂದು ನೋಂದಣಿ ಮಾಡಿತು. ಕರ್ನಾಟಕಕ್ಕೆ ಈವರೆಗೆ ಸಾಕಷ್ಟು ಜಿಐ ಟ್ಯಾಗ್ ಲಭಿಸಿದ್ದರೂ ಕರುನಾಡಿಗೆ ಮೊದಲ ಜಿಐ ಟ್ಯಾಗ್ ಲಭಿಸಿದ್ದು ಮಾತ್ರ ಮೈಸೂರು ರೇಷ್ಮೆ ಸೀರೆಯಿಂದ ಎಂಬುದು ಹೆಮ್ಮೆಯ ವಿಚಾರ.

ಗುಣಮಟ್ಟದಲ್ಲಿ ಎಂದಿಗೂ ರಾಜಿ ಮಾಡಿಕೊಳ್ಳದೇ ಇರುವುದರಿಂದಲೂ ಮೈಸೂರು ರೇಷ್ಮೆ ಸೀರೆ ನಾರಿಯರ ಮನ ಗೆದ್ದಿದೆ. ಅಷ್ಟಕ್ಕೂ ಮೈಸೂರು ರೇಷ್ಮೆ ಸೀರೆಗೆ ಮಹಿಳೆಯರು ಹೀಗೆ ಮುಗಿಬೀಳಲು ಅದರ ಶೇ 100ರಷ್ಟು ಪರಿಶುದ್ಧತೆ ಮುಖ್ಯ ಕಾರಣ. ಎಂದಿಗೂ ಕಳೆಗುಂದದ ಜರಿಯನ್ನು ಸೀರೆಗೆ ಬಳಕೆ ಮಾಡಲಾಗುತ್ತದೆ. ರೇಷ್ಮೆನೂಲಿನೊಂದಿಗೆ ಬೆಳ್ಳಿ ಹಾಗೂ ಅಲ್ಪಪ್ರಮಾಣದಲ್ಲಿ ಚಿನ್ನದ ಮಿಶ್ರಣ ಈ ಜರಿಗೆ ಇರುತ್ತದೆ. ಮೃದುತ್ವ, ವಿಭಿನ್ನ ಹೊಳಪು, ಬಾಳಿಕೆಗಳಿಂದ ಈ ಸೀರೆ ಹೆಸರುವಾಸಿ.

ಒಂದೇ ಸೂರಿನಡಿಯಲ್ಲಿ ರೇಷ್ಮೆ ಗೂಡು ಖರೀದಿ, ನೂಲು ತೆಗೆಯುವಿಕೆ, ನೇಯ್ಗೆ, ಮಾರಾಟ ಎಲ್ಲವನ್ನೂ ನಿರ್ವಹಿಸುವ ದೇಶದ ಏಕೈಕ ಸಂಸ್ಥೆ ಕೆಎಸ್‌ಐಸಿ. ಮೈಸೂರು ರೇಷ್ಮೆ ಸೀರೆ ಗುಣಮಟ್ಟ ಖಾತ್ರಿಗಾಗಿ ವಿಶಿಷ್ಟ ಕೋಡ್ ಸಂಖ್ಯೆ, ಹಾಲೊಗ್ರಾಮ್ ಅನ್ನು ಪ್ರತೀ ಜರಿ ಸೀರೆಗಳಲ್ಲಿ ಹಾಕಲಾಗುತ್ತದೆ. ಈ ಕಾರಣಗಳಿಂದ ಕರ್ನಾಟಕದ ಹೆಮ್ಮೆಯ ರೇಷ್ಮೆ ಸೀರೆಗೆ ಈಗಲೂ ಭರಪೂರ ಬೇಡಿಕೆ ಹಾಗೂ ಮಾನ್ಯತೆಯಿದೆ.

## ಮೈಸೂರು ರೇಷ್ಮೆ ಇತಿಹಾಸ

ಕರ್ನಾಟಕದಲ್ಲಿ ರೇಷ್ಮೆ ಇತಿಹಾಸವನ್ನೊಮ್ಮೆ ಇಣುಕಿ



ಮೈಸೂರು ಸಿಲ್ಕ್ ಸೀರೆಯಲ್ಲಿ ಮಿಂಚಿದ ನಟ ಸಾನ್ಯಾ ಅಯ್ಯರ್ ಚಿತ್ರ: ಸನಾ ಇಬ್ರಾಹಿಂ